ಪ್ರಸ್ತಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಮುಖ್ಯಮಂತ್ರಿಗಳ ಪರವಾಗಿ). —ಮಾನ್ಯ ಅಧ್ಯಕ್ಷರೇ, ೧೯೮೯ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ : ''೧೯೮೯ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಸಭೆಯನ್ನು ವಿಭಜಿಸಲಾಯಿತು

''ಹೌದು'' ಎನ್ನುವವರು — ೫೭

''ಇಲ್ಲ'' ಎನ್ನುವವರು — ೫೨

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.)

ಅಧ್ಯಕ್ಷರು —ಎರಡನೇ ಬಿಲ್ಲಿಗೆ ಕೃಷ್ಣನ್‌ರವರು ಅಮೆಂಡ್‌ಮೆಂಟ್ ಕೊಟ್ಟಿದ್ದಾರೆ. ಈಗ ಮೂರನೇ ಬಿಲ್ಲನ್ನು ತೆಗೆದುಕೊಳ್ಳಿರಿ.

೧೯೮೯ನೇ ಇಸವಿಯ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್. —ಮಾನ್ಯ ಅಧ್ಯಕ್ಷರೇ, ''೧೯೮೯ನೇ ಇಸವಿಯ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಸಲಾಯಿತು

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಯವರು). —ಇದು ಸರಳವಾದಂಥ ತಿದ್ದುಪಡಿ ಮಸೂದೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ ವಿಷಯಗಳನ್ನು ಒಳಗೊಂಡ ತಿದ್ದುಪಡಿಗಳನ್ನು ಇದರಲ್ಲಿ ಸೂಚಿಸತಕ್ಕಂಥದ್ದು. ಇದರಲ್ಲಿ ವಿಶೇಷವಾದಂಥ ತಿದ್ದುಪಡಿಗಳೇನೂ ಇಲ್ಲ. ಮಾನ್ಯ ಸದಸ್ಯರುಗಳು ಇದಕ್ಕೆ ಬೆಂಬಲವನ್ನು ನೀಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ : "೧೯೮೯ನೇ ಇಸವಿಯ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೮ರ ವರೆಗೆ:—

ಅಧ್ಯಕ್ಷರು. —" ಖಂಡ ೨ ರಿಂದ ೮ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೮ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ:—

ಅಧ್ಯಕ್ಷರು. —ಪ್ರಸ್ತಾವ "ಏನೆಂದರೆ" ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ). —"೧೯೮೯ನೇ ಇಸವಿಯ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ" ೧೯೮೯ರ ಕರ್ನಾಟಕ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಮಾಡಿರುವಂತೆ ಅಂಗೀಕರಿಸುವುದು.

ಪ್ರಸಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೯ನೇ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೊಟೇಲುಗಳ ಮತ್ತು ವಸತಿ ಗೃಹಗಳ) ತೆರಿಗೆ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನೆ ಪ್ರಸ್ತಾವ

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು). — ಮಾನ್ಯ ಅಧ್ಯಕ್ಷರೇ, "೧೯೮೯ನೇ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೋಟೇಲುಗಳ ಮತ್ತು ವಸತಿ ಗೃಹಗಳ) ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಪ್ರೊ॥ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು). — ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕೂಡ ಸರಳವಾದಂಥಹ ವಿಚಾರ ಇದೆ ಸ್ವಲ್ಪ ದೊಡ್ಡ ದೊಡ್ಡ ಹೋಟೆಲ್ ಗಳಲ್ಲಿ ಬಾಡಿಗೆಯನ್ನು ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಅದೂ ಸಹ ಕಾಲಕ್ಕೆ ಅನುಗುಣವಾಗಿ ಹೆಚ್ಚು ಆಗಿದೆ ಎಂದು ಭಾವಿಸುತ್ತೇನೆ. ಇದಕ್ಕೆ ಮಾನ್ಯ ಸದಸ್ಯರು ಅನುಮೋದನೆಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು. — ಪ್ರಸ್ತಾವ ಏನೆಂದರೆ, "೧೯೮೯ನೇ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೋಟೆಲುಗಳ ಮತ್ತು ವಸತಿ ಗೃಹಗಳ) ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು. "

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಯೋಚಿಸುವುದು

ಖಂಡ ೨

ಅಧ್ಯಕ್ಷರು. — "ಪ್ರಸ್ತಾವ ಏನೆಂದರೆ, ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಎರಡನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"